

# ಸ್ವರ ಹೊಸ ಅವತಾರ

‘ತನು ವೆಡ್ಸ್ ಮನು ರಿಟರ್ನ್ಸ್’, ‘ಪ್ರೇಮ್ ರತನ್ ಧನ್ ಪಾಯೊ’ ಚಿತ್ರಗಳಿಂದ ಗುರುತಿಸಿಕೊಂಡಿರುವ ನಟಿ ಸ್ವರ ಭಾಸ್ಕರ್ ವೃತ್ತಿ ಬದುಕಿನಲ್ಲಿ ಹೊಸ ಸಾಹಸಕ್ಕೆ ಕೈ ಹಾಕಿದ್ದಾಳೆ. ಸಾಮಾನ್ಯವಾಗಿ ನಟಿಯರು ಚಿತ್ರರಂಗದಲ್ಲಿ ಬರಹಗಾರ್ತಿಯರಾಗಿ ಗುರುತಿಸಿಕೊಳ್ಳುವುದು ಅತಿ ವಿರಳ. ಸ್ವರ ತನ್ನ ಚೌಕಟ್ಟನ್ನು ಮೀರುವ ಪ್ರಯತ್ನ ಮಾಡಿದ್ದಾಳೆ.

ಎಲ್ಲ ವಯೋಮಾನದವರೂ ಇಷ್ಟಪಡುವಂತಹ ಪ್ರೇಮಕಥೆಯೊಂದನ್ನು ಸ್ವರ ಬರೆದಿದ್ದಾಳಂತೆ. ಅದು ತ್ರಿಕೋನ ಪ್ರೇಮಕಥೆ. ರಂಜನೆಯ ಜತೆ ತುಂಬಾ ಮೆಲೊ ಡ್ರಾಮವೂ ಇದೆಯಂತೆ. ಚಿತ್ರರಂಗದ ಕೆಲವು ಸೂತ್ರಗಳನ್ನು ಬಲ್ಲ ಆಕೆ, ಅವುಗಳನ್ನು ತನ್ನ ಕಥೆಯಲ್ಲಿಯೂ ಅಳವಡಿಸಿಕೊಂಡಿದ್ದಾಳಂತೆ. ಒಬ್ಬ ಯುವತಿ ಮತ್ತು ಇಬ್ಬರು ಯುವಕರ ನಡುವಣ ಪ್ರೇಮ ಪ್ರಸಂಗವನ್ನು ಸ್ವರ ಹೊಸೆದಿದ್ದಾಳೆ.

ಸ್ತ್ರೀಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು ಸ್ವರ ಕಥೆ ಬರೆಯಲು ಪ್ರಾರಂಭಿಸಿದ್ದು. ಆದರೆ, ಕಥೆ ಮುಂದುವರೆದಾಗ ನಾಯಕಿಗಿಂತಲೂ ಇನ್ನೆರಡು ಪುರುಷ ಪಾತ್ರಗಳೇ ಆಕೆಗೆ ಆಸಕ್ತಿಕರ ಎನಿಸಿವೆ.

‘ನಿಮ್ಮದೇ ಕಥೆ ಸಿನಿಮಾವಾದರೆ ನೀವೇ ನಟಿಸುತ್ತೀರಾ?’ ಎಂಬ ಪ್ರಶ್ನೆ ಮುಂದಿಟ್ಟರೆ, ‘ಹಾಗೆಂದು ಭರವಸೆ ಇದೆ. ನನ್ನ ಚಿತ್ರಕ್ಕಾಗಿ ನನ್ನನ್ನೇ ಆಡಿಷನ್ ಮಾಡುವುದಿಲ್ಲ ಎಂದು ನಂಬಿದ್ದೇನೆ’ ಎಂದು ಪ್ರತಿಕ್ರಿಯೆ ನೀಡಿದ್ದಾಳೆ. ಹಾಗೆಂದು ಆಕೆ ತನ್ನನ್ನು ಬರಹಗಾರ್ತಿಯೆಂದು ಭಾವಿಸಿಲ್ಲವಂತೆ. ‘ಈ ಕಥೆಯನ್ನು ಬರೆಯಲು ಪ್ರಾರಂಭಿಸಿದ ಹೊತ್ತಿನಲ್ಲಿ, ನನಗೆ ಬಂದ ಸಿನಿಮಾಗಳಲ್ಲಿನ ಪಾತ್ರಗಳು ಸಮಾಧಾನ ನೀಡಿರಲಿಲ್ಲ. ಹೀಗಾಗಿ ನನಗಾಗಿ ಬರೆಯಬೇಕು ಎಂದು ತೀರ್ಮಾನಿಸಿದೆ. ನಾನು ಇದನ್ನು ಒಬ್ಬ ನಟಿಯಾಗಿ ಬರೆದಿದ್ದೇನೆ, ಅದೂ ನನಗೋಸ್ಕರ. ಬರೆಯುತ್ತಾ ಹೋದಾಗ ಪಾತ್ರಗಳು ನಮ್ಮ ನೇರ ನಿಯಂತ್ರಣದಲ್ಲಿ ಇರುವುದಿಲ್ಲ. ಅವುಗಳನ್ನು ನಾವೇ ಶೋಧಿಸಬೇಕು ಎಂಬುದು ಅರಿವಾಯಿತು’ ಎಂದಿದ್ದಾಳೆ ಸ್ವರ. ತನ್ನ ಕಥೆ ಮುಂದಿನ ವರ್ಷ ಸಿನಿಮಾ ರೂಪ ಪಡೆದುಕೊಳ್ಳಲಿದೆ ಎಂಬ ನಿರೀಕ್ಷೆ ಆಕೆಯದು.



# ತೊರೆದು ಹೋದಳೆ ನರ್ಗಿಸ್?

ನೀಳ ಮೂಗಿನ ಸುಂದರಿ ನರ್ಗಿಸ್ ಫಖ್ರಿ, ಇಮ್ರಾನ್ ಹಶ್ಮಿ ಜತೆ ನಟಿಸಿದ್ದ ‘ಅಜರ್’ ಚಿತ್ರದ ಪ್ರಚಾರ ಕಾರ್ಯಕ್ರಮಗಳತ್ತ ಸುಳಿದಿರಲಿಲ್ಲ. ಒಂದೆರಡು ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಆಕೆ ಅದರಿಂದ ಸಂಪೂರ್ಣ ಆಸಕ್ತಿ ಕಳೆದುಕೊಂಡ ಅರ್ಧದಲ್ಲಿಯೇ ನಾಪತ್ತೆಯಾದಳು. ಕೊನೆಗೆ ದೇಶವನ್ನೇ ಬಿಟ್ಟುಹೋದಳು. ಆಕೆಯೀಗ ನ್ಯೂಯಾರ್ಕ್‌ನಲ್ಲಿದ್ದಾಳೆ. ‘ಹೌಸ್‌ಫುಲ್3’ ಚಿತ್ರಕ್ಕೂ ಇದೇ ರೀತಿ ಕೈ ಕೊಟ್ಟಳು. ಇನ್ನು ‘ಬಾಂಜೊ’ ಚಿತ್ರವಂತೂ ಪೂರ್ಣಗೊಂಡೇ ಇಲ್ಲ. ನಿರ್ಮಾಪಕರಿಗೆ ಹೇಳದೆ ಕೇಳದೆ ಹೀಗೆ ಪಲಾಯನ ಮಾಡಿದ್ದಾಳೆ ಎಂದು ಬಿಟೌನ್ ಒಳಗಿನಿಂದ ಬಂದಿರುವ ವರ್ತಮಾನ.

‘ನರ್ಗಿಸ್‌ಗೆ ಪೆಟ್ಟಾಗಿದೆ. ಹೀಗಾಗಿ ಪ್ರಚಾರಕ್ಕೆ ಬರಲು ಸಾಧ್ಯವಾಗಿಲ್ಲ’ ಎಂದು ‘ಅಜರ್’ ಚಿತ್ರತಂಡ ತೇಪೆ ಹಚ್ಚಲು ನೋಡಿತ್ತು. ಆದರೆ, ಆಕೆಯ ಕುರಿತು ತಿಳಿದಿರುವ ಆಪ್ತ ಸ್ನೇಹಿತರೊಬ್ಬರು ನೀಡುವ ಮಾಹಿತಿ ಪ್ರಕಾರ, ನರ್ಗಿಸ್ ಆಘಾತದಿಂದ ಮಾನಸಿಕವಾಗಿ ಕುಗ್ಗಿ ಹೋಗಿದ್ದಾಳೆ. ತನ್ನ ಸಂಪೂರ್ಣ ಲಗೇಜುಗಳನ್ನು ತುಂಬಿಸಿಕೊಂಡು ತನ್ನ ತವರು ನ್ಯೂಯಾರ್ಕ್‌ಗೆ ಮರಳಿದ್ದಾಳೆ. ತನಗೆ ಇಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ದೇಶವನ್ನೇ ತೊರೆಯುತ್ತಿರುವುದಾಗಿ ಆಕೆ ಹೇಳಿದ್ದಾಳೆ ಎನ್ನುವುದು ಆಪ್ತರು ಹೇಳುವ ಸಂಗತಿ. ತನಗಾಗಿ ದಿನಾಂಕಗಳನ್ನು ಹೊಂದಿಸಿಕೊಳ್ಳುವಂತೆ, ಭಾರತಕ್ಕೆ ಹಿಂದಿರುಗಿದಾಗ ಚಿತ್ರೀಕರಣ ನಡೆಸುವಂತೆ ಆಕೆ ‘ಬಾಂಜೊ’ದ ನಿರ್ಮಾಪಕರಿಗೆ ಕೇಳಿಕೊಂಡಿದ್ದಾಳೆ ಎನ್ನಲಾಗುತ್ತಿದೆ. ಶೇ 97ರಷ್ಟು ಚಿತ್ರೀಕರಣ ಮುಗಿಸಿರುವ ನಿರ್ಮಾಪಕರು ಸದ್ಯ ತಲೆ ಚಚ್ಚಿಕೊಳ್ಳುತ್ತಿದ್ದಾರೆ.

ಹಾಗಾದರೆ ನರ್ಗಿಸ್‌ಗೆ ಆಗಿರುವುದಾದರೂ ಏನು? ಮೂಲಗಳ ಪ್ರಕಾರ ಪ್ರೇಮ ವೈಫಲ್ಯದ ಆಘಾತ. ಒಂದಷ್ಟು ಕಾಲದಿಂದ ಉದಯ್ ಚೋಪ್ರಾ ಜತೆ ನರ್ಗಿಸ್ ಸುತ್ತಾಡುತ್ತಿದ್ದಳು. ಆತನೊಂದಿಗೆ ತನ್ನ ಮದುವೆಯ ಕುರಿತು ಅಧಿಕೃತ ಘೋಷಣೆ ನಡೆಸಲೂ ಸಿದ್ಧತೆ ನಡೆಸಿದ್ದಳು. ಆದರೆ, ಇದ್ದಕ್ಕಿದ್ದಂತೆ ಕೈಕೊಟ್ಟ ಉದಯ್, ಆಕೆಯಿಂದ ದೂರ ಸರಿದ್ದಾನೆ. ಇದು ಆಕೆಗೆ ತೀವ್ರ ಆಘಾತ ಉಂಟು ಮಾಡಿದೆ. ಒಂದು ಸಮಯದಲ್ಲಿ ಉದಯ್, ಆಕೆಯ ಹಿಂದೆ ಬಿದ್ದು ಮದುವೆಯಾಗುವಂತೆ ಕಾಡಿಸಿದ್ದ. ಆಗ ಆಕೆ ತಾನು ಸದ್ಯಕ್ಕೆ ವೃತ್ತಿ ಬದುಕಿಗೆ ಆದ್ಯತೆ ನೀಡಬೇಕು. ತನ್ನ ಗಮನ ಹಾಲಿವುಡ್‌ನತ್ತ ಇದೆ ಎಂದು ಹೇಳಿದ್ದಳು. ಬಳಿಕ ಉದಯ್‌ನ ಪ್ರೇಮಪಾಶಕ್ಕೆ ಬಿದ್ದಿದ್ದಳು. ಆದರೆ ಪರಿಸ್ಥಿತಿ ಈ ಸಂಪೂರ್ಣ ಉಲ್ಟಾ ಆಗಿದೆ. ನರ್ಗಿಸ್ ಶಾಕ್‌ನಿಂದ ಹೊರಬರಲು ಸಾಧ್ಯವಾಗದೆ ಒದ್ದಾಡುತ್ತಿದ್ದಾಳೆ ಎನ್ನುತ್ತದೆ ಆಕೆಯ ಆಪ್ತ ಬಳಗ.

■ ಅಮಿ